# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 66/2021

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ದಿನೇಶ | ಫ್ರಾಸಾಃ | 16 |
| **ತಂದೆಯ ಹೆಸರುಃ** | ಶಿವರಾಜು | ಚಾಸಾಃ | 32 |
| **ವಯಸ್ಸುಃ** | 37 | ಪ್ರಮಾಣ ವಚನ ಭೋದಿಸಿದ ದಿನಾಂಕ: | 23-09-2025 |
| **ಉದ್ಯೋಗಃ** | ಎ.ಇ | | |
| **ವಾಸ ಸ್ಥಳಃ** | ಶಿಡ್ಲಘಟ್ಟ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ದಿ.*27-03-2021* ರಂದು ಶಿಡ್ಲಘಟ್ಟದ ಪಿಡಬ್ಲ್ಯೂಡಿ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ, ಮೇಲಾಧಿಕಾರಿಯಿಂದ ಈ ಪ್ರಕಣದಲ್ಲಿ ಘಟನಾ ಸ್ಥಳದ ನಕಾಶೆ ತಯಾರಿಸುವಂತೆ ಬಂದ ಸೂಚನೆಯ ಹಿನ್ನಲೆಯಲ್ಲಿ ದಿ.*08-04-2021* ರಂದು ವಸಂತ ಕುಮಾರ್ ಎಂಬ ಪೋಲಿಸ್ ನಮ್ಮ ಕಚೇರಿಗೆ ಬಂದು ನನ್ನನು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯ ಬಳಿ ಕರೆದುಕೊಂಡು ಹೋಗಿ ಸ್ಥಳ ತೋರಿಸಿಕೊಟ್ಟ ಹಿನ್ನಲೆಯಲ್ಲಿ ಸ್ಥಳದಲ್ಲಿ ಕರಡು ನಕಾಶೆ ತಯಾರಿಸಿ ನಂತರ ಕಚೇರಿಗೆ ಬಂದು ಪಕ್ಕಾ ನಕಾಶೆ ತಯಾರಿಸಿ ತನಿಖಾಧಿಕಾರಿಗೆ ಕಳುಹಿಸಿರುತ್ತೇನೆ. ಸದರಿ ನಕಾಶೆ ಈಗ ನೋಡುತ್ತಿದ್ದು ನಿಪಿ-*59* ಎಂದು , ಸಹಿಯನ್ನು ನಿಪಿ-*59(ಎ)* ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ.ಬಿ.ಎಸ್ ವಕೀಲರಿಂದ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ.ಆರ್.ಸಿ.ಎಸ್.ವಕೀಲರಿಂದ ಪಾಟೀ ಸವಾಲು**

ನಾನು ಹೇಳಿದಂತೆ ಸ್ಥಳಕ್ಕೆ ಹೋಗಿಲ್ಲ , ಪೋಲಿಸರ ಕೋರಿಕೆಯ ಮೇರೆಗೆ ಕಚೇರಿಯಲ್ಲಿ ಅವಅರಿಗೆ ಅನುಕೂಲವಾಗುವಂತೆ ನಕಾಶೆ ಸೃಷ್ಟಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ23.09.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.